ಸುದ್ದಿ ಮಿಡಿತ

## ಅರಸು ಪ್ರಶಸ್ತಿಗೆ ಸಾಧಕರನ್ನು ಗುರುತಿಸಲು ಆಯ್ಕೆ ಸಮಿತಿ ರಚನೆ

**ಬೆಂಗಳೂರು:** ಪ್ರಸಕ್ತ ಸಾಲಿನ ಡಿ.ದೇವರಾಜ ಅರಸು ಪ್ರಶಸ್ತಿಗೆ ಸಾಧಕರನ್ನು ಗುರುತಿಸಲು



ಪ್ರೊ.ಕೆ. ಮರುಳಸಿದ್ದಪ್ಪ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿ ರಚಿಸಲಾಗಿದೆ.

ಡಿ.ದೇವರಾಜ ಅರಸು ಅವರ 99ನೇ ಜನ್ಮ ದಿನಾಚರಣೆ ಅಂಗವಾಗಿ ಕೊಡಲಾಗುವ ಪ್ರಶಸ್ತಿಗೆ ಅರ್ಹ ವ್ಯಕ್ತಿ ಅಥವಾ ಸಂಸ್ಥೆಯನ್ನು ಆಯ್ಕೆ ಮಾಡಲು ಈ ಸಮಿತಿ ರಚಿಸಿದ್ದು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಆಯುಕ್ತ ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.

ಉಳಿದಂತೆ ಸಾಹಿತಿಗಳಾದ ಡಾ.ಬಂಜಗೆರೆ ಜಯಪ್ರಕಾಶ್, ಡಾ.ಜಿ.ಕೆ. ರವಿ, ಜೆ. ಶ್ರೀನಿವಾಸನ್, ಕಮಲಾ ಹಂಪನಾ ಸದಸ್ಯರಾಗಿದ್ದು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಿರ್ದೇಶಕ ವಿ.ವಿಶುಕುಮಾರ್ ಅವರು ಪದನಿಮಿತ್ತ ಸದಸ್ಯರಾಗಿರುತ್ತಾರೆ.

## ಮತ್ತೆ ಮೂವರ ಬಂಧನ

**ಶಿವಮೊಗ್ಗ:** ಡಿಸಿಸಿ ಬ್ಯಾಂಕ್‌ನಲ್ಲಿ ನಡೆದ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಮತ್ತೆ ಮೂವರನ್ನು ಜಿಲ್ಲಾ ಅಪರಾಧ ಪತ್ತೆ ದಳದ ಸಿಬ್ಬಂದಿ

### ಶುಂಠಿಯಿಂದ ಫಲವತ್ತಾದ ಭೂಮಿ ಬಂಜರು, ವಿಷಮಯವಾಗುತ್ತಿರುವ ಜಲಮೂಲ: ಅನಂತ ಹೆಗಡೆ ಆಶೀಸರ ಆತಂಕ

# ಮಲೆನಾಡಲ್ಲಿ ಹೆಚ್ಚಾದ ರಾಸಾಯನಿಕ ಬಳಕೆ

**ಬೆಂಗಳೂರು:** ಮಲೆನಾಡಿನಲ್ಲಿ ಶುಂಠಿ ಬೆಳೆಗೆ ಹೆಚ್ಚು ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕ ಬಳಸುತ್ತಿದ್ದು, ಇದರಿಂದಾಗಿ ಫಲವತ್ತಾದ ಭೂಮಿ ಬಂಜರಾಗುತ್ತಿದೆ ಎಂದು ಪಶ್ಚಿಮಘಟ್ಟ ಕಾರ್ಯಪಡೆ ಮಾಜಿ ಅಧ್ಯಕ್ಷ ಅನಂತ ಹೆಗಡೆ ಆಶೀಸರ ಆತಂಕ ವ್ಯಕ್ತಪಡಿಸಿದ್ದಾರೆ.



ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಲೆನಾಡಿನಲ್ಲಿ ಭೂಮಿ ಬಂಜರಾಗುತ್ತಿದೆ. ಜಲಮೂಲಗಳು ವಿಷಮಯವಾಗುತ್ತಿವೆ ಎಂಬುದು ಸಮೀಕ್ಷಾ ವರದಿಯಿಂದ ಬಹಿರಂಗವಾಗಿದೆ. ಆದ್ದರಿಂದ ಸಂಬಂಧಪಟ್ಟವರು ರೈತರಿಗೆ ಅರಿವು ಮೂಡಿಸಬೇಕು ಎಂದು ಅವರು ಮನವಿ ಮಾಡಿದರು.

ಶುಂಠಿಗೆ ಬೆಲೆ ಹೆಚ್ಚಿರುವುದರಿಂದ ಪಶ್ಚಿಮ ಘಟ್ಟದ ಜಿಲ್ಲೆಗಳಲ್ಲಷ್ಟೇ ಅಲ್ಲದೆ ಅರೆಮಲೆನಾಡಿನಲ್ಲೂ ಹೆಚ್ಚಾಗಿ ಬೆಳೆಯಲಾಗುತ್ತಿದೆ. ಭತ್ತ ಬೆಳೆಯುವ ಗದ್ದೆಗಳಲ್ಲೂ ಶುಂಠಿ ಬೆಳೆಯಲಾಗುತ್ತಿದೆ. ಒಮ್ಮೆ ಶುಂಠಿ ಬೆಳೆದರೆ ಮೂರು ವರ್ಷ ಭೂಮಿ ಹಾಳು ಬಿಡುತ್ತಾರೆ. ಏಕೆಂದರೆ ಹೆಚ್ಚು ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕ ಬಳಕೆಯಿಂದ ಭೂಮಿ ಬಂಜರಾಗುತ್ತಿದೆ ಎಂದು ಹೇಳಿದರು.

ಎಂಡೋಸಲ್ಫಾನ್‌ನಂತಹ 34 ತೀವ್ರ ರಾಸಾಯನಿಕ, ಕೀಟನಾಶಕಗಳನ್ನು ನಿಷೇಧಿಸಲಾಗಿದೆ ಎಂದು ಕೃಷಿ ಇಲಾಖೆ ಹೇಳುತ್ತದೆ. ಆದರೆ, ಬೇರೆ ಬೇರೆ ಹೆಸರುಗಳಲ್ಲಿ ಇವನ್ನು ಮಾರಲಾಗುತ್ತಿದೆ. ಕೃಷಿ, ಆರೋಗ್ಯ, ಪರಿಸರ ಇಲಾಖೆಗಳ ಉನ್ನತ

- ■ ಸಮೀಕ್ಷಾ ವರದಿಯಿಂದ ಬಹಿರಂಗ
- ■ ಶುಂಠಿ ಬೆಳೆಗೆ ಹೆಚ್ಚು ರಾಸಾಯನಿಕ ಬಳಕೆ
- ■ ಬೇರೆ ಬೇರೆ ಹೆಸರಿನಲ್ಲಿ ರಾಸಾಯನಿಕಗಳ ಮಾರಾಟ
- ■ ಉನ್ನತಾಧಿಕಾರಿಗಳ ಸಭೆ ಕರೆದು ಮಾರಾಟ ತಡೆಗಟ್ಟುವಂತೆ ಆಗ್ರಹ

ಅಧಿಕಾರಿಗಳ ಸಭೆಯನ್ನು ಸರ್ಕಾರ ತಕ್ಷಣ ಕರೆದು ಮಾರಾಟ ತಡೆಗಟ್ಟಬೇಕು ಎಂದು ಆಗ್ರಹಿಸಿದರು.

ಮೊದಲು ಕೇರಳೀಯರು ಇಲ್ಲಿನ ಭೂಮಿಯನ್ನು ರೈತರಿಂದ ಗುತ್ತಿಗೆ ಪಡೆದು ಶುಂಠಿ ಬೆಳೆಯುತ್ತಿದ್ದರು. ಬೆಲೆ ಹೆಚ್ಚಾಗಿದ್ದರಿಂದ ಈಗ ಸ್ಥಳೀಯರೂ ಎಲ್ಲೆಡೆ ವ್ಯಾಪಕವಾಗಿ ಶುಂಠಿ ಬೆಳೆಯುತ್ತಿದ್ದಾರೆ. ಗದ್ದೆಗಳ ಜೊತೆ ಅರಣ್ಯ-ಕಾನು, ಕೆರೆ ಅಂಗಳಗಳಲ್ಲೂ ಶುಂಠಿ ಕಾಣಬಹುದು.

ರಾಸಾಯನಿಕಗಳು ಹಳ್ಳ, ಕೆರೆ, ಬಾವಿಗಳನ್ನು ಸೇರುತ್ತಿದ್ದು ವರದಾ, ಕುಮುದ್ವತಿ, ತುಂಗಾ, ಭದ್ರಾ ನದಿಗಳ ನೀರು ಅಶುದ್ಧವಾಗಿದೆ. ಇಲ್ಲಿನ ಪಕ್ಷಿ ಸಂಕುಲ, ವನ್ಯಜೀವಿ, ಸಸ್ಯ ಸಂಕುಲದ ಮೇಲೆ ವಿಷಪ್ರಾಶನವಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು.

**ಅರೆಮಲೆನಾಡು ಪ್ರದೇಶದಲ್ಲೂ**

ಸುಮಾರು 75 ಸಾವಿರದಿಂದ ಒಂದು ಲಕ್ಷ ಎಕರೆಯಲ್ಲಿ ಮಲೆನಾಡಿನಲ್ಲಿ ಶುಂಠಿ ಬೆಳೆಯಲಾಗುತ್ತಿದೆ. ಪಶ್ಚಿಮ ಘಟ್ಟದ ಕೊಡಗು, ಹಾಸನ, ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಶುಂಠಿಯಿಂದ ಭೂಮಿ ಬಂಜರಾಗುತ್ತಿದೆ. ತರೀಕೆರೆ, ಲಕ್ಕವಳ್ಳಿ, ಬೇಲೂರು, ಮುಂಡಗೋಡ, ಹಳಿಯಾಳದಂತಹ ಅರೆಮಲೆನಾಡು ಪ್ರದೇಶಗಳಿಗೂ ಶುಂಠಿ ವ್ಯಾಪಿಸಿದೆ ಎಂದು ಆತಂಕ ವ್ಯಕ್ತಪಡಿಸಿದರು.

### ಚಿಕ್ಕಮಗಳೂರು ಜಿಲ್ಲೆಗೆ ಸಂಬಂಧಿಸಿದ ಅಂಶಗಳು

ಭಾರತೀಯ ವಿಜ್ಞಾನ ಸಂಸ್ಥೆಯ ಪರಿಸರ ವಿಜ್ಞಾನ ಕೇಂದ್ರದಿಂದ 2013-14 ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಅರಣ್ಯ ಪರಿಸ್ಥಿತಿಯ ಬಗ್ಗೆ ಅಧ್ಯಯನ ಕೈಗೊಳ್ಳಲಾಗಿದ್ದು ಪ್ರಮುಖ ಅಂಶಗಳು ಕೆಳಕಂಡಂತಿವೆ ಎಂದು ಅನಂತ ಹೆಗಡೆ ಆಶೀಸರ ಹೇಳಿದರು. ಜಿಲ್ಲೆಯ ಒಟ್ಟು ಭೂವಿಸ್ತೀರ್ಣದ ಶೇ.39 ರಷ್ಟು ಅಂದರೆ 7,201 ಚದರ ಕಿ.ಮೀ. ಅರಣ್ಯ ಪ್ರದೇಶವಿದೆ. 200 ಜಾತಿಯ ಅಪಾಯದ ಅಂಚಿನಲ್ಲಿರುವ ಸಸ್ಯ ವರ್ಗವಿದೆ. ಮನುಷ್ಯ ಮತ್ತು ವನ್ಯಜೀವಿ ನಡುವಿನ ಸಂಘರ್ಷ ತಪ್ಪಿಸಲು ಕ್ರಮ ಕೈಗೊಳ್ಳಬೇಕು. 63,247 ಹೆಕ್ಟೇರ್ ಸಿ ಮತ್ತು ಡಿ ವರ್ಗದ ಭೂಮಿಯಿದೆ. ಇಲ್ಲಿ ನೈಸರ್ಗಿಕ ಅರಣ್ಯವಿದ್ದು 4903 ಹೆಕ್ಟೇರ್ ಅರಣ್ಯ ಭೂಮಿ ಅತಿಕ್ರಮಣ ಮಾಡಲಾಗಿದೆ. ಕೊಪ್ಪ ಅರಣ್ಯ ವಿಭಾಗದಲ್ಲಿ 63,247 ಹೆಕ್ಟೇರ್ ಅರಣ್ಯ ಪ್ರದೇಶ ರೆವಿನ್ಯೂ ವ್ಯಾಪ್ತಿಯಲ್ಲಿದೆ. 8014 ಹೆಕ್ಟೇರ್ ಅರಣ್ಯ ಪ್ರದೇಶ ಅತಿಕ್ರಮವಾಗಿದೆ. ಭದ್ರಾ ಹುಲಿ ಸಂರಕ್ಷಿತ ಪ್ರದೇಶವು ಆನೆ, ಹುಲಿ ಸೇರಿದಂತೆ ವನ್ಯಜೀವಿಗಳ ಸಂರಕ್ಷಿತ ಪ್ರದೇಶವಾಗಿದೆ ಎಂದು ವರದಿ ತಿಳಿಸಿದೆ.

### ಸಸ್ಯ ಸಂಕುಲದ ಮೇಲೆ ವಿಷಪ್ರಾಶನ

ಮೊದಲು ಕೇರಳೀಯರು ಇಲ್ಲಿನ ಭೂಮಿಯನ್ನು ರೈತರಿಂದ ಗುತ್ತಿಗೆ ಪಡೆದು ಶುಂಠಿ ಬೆಳೆಯುತ್ತಿದ್ದರು. ಬೆಲೆ ಹೆಚ್ಚಾಗಿದ್ದರಿಂದ ಈಗ ಸ್ಥಳೀಯರೂ ವ್ಯಾಪಕವಾಗಿ ಶುಂಠಿ ಬೆಳೆಯುತ್ತಿದ್ದಾರೆ. ಗದ್ದೆಗಳ ಜತೆ ಅರಣ್ಯ-ಕಾನು, ಕೆರೆ ಅಂಗಳಗಳಲ್ಲೂ ಶುಂಠಿ ಕಾಣಬಹುದು. ರಾಸಾಯನಿಕಗಳು ಹಳ್ಳ, ಕೆರೆ, ಬಾವಿಗಳನ್ನು ಸೇರುತ್ತಿದ್ದು ವರದಾ, ಕುಮುದ್ವತಿ, ತುಂಗಾ, ಭದ್ರಾ ನದಿಗಳ ನೀರು ಅಶುದ್ಧವಾಗಿದೆ. ಇಲ್ಲಿನ ಪಕ್ಷಿ ಸಂಕುಲ, ವನ್ಯಜೀವಿ, ಸಸ್ಯ ಸಂಕುಲದ ಮೇಲೆ ವಿಷಪ್ರಾಶನವಾಗುತ್ತಿದೆ.

■ ಅನಂತ ಹೆಗಡೆ ಆಶೀಸರ, ಪಶ್ಚಿಮಘಟ್ಟ ಕಾರ್ಯಪಡೆ ಮಾಜಿ ಅಧ್ಯಕ್ಷ

ಎಂಡೋಸಲ್ಫಾನ್‌ನಂತಹ ಅವಘಡ ಸಂಭವಿಸುವ ಮುನ್ನ ಸರ್ಕಾರ, ಸಹಕಾರಿ ಸಂಸ್ಥೆಗಳು, ರೈತಪರ ಸಂಘಟನೆಗಳು ಎಚ್ಚೆತ್ತುಕೊಳ್ಳಬೇಕು.

ನೀರು ಮತ್ತು ಮಣ್ಣಿನ ಪರೀಕ್ಷೆಯನ್ನು ಸರ್ಕಾರ ನಡೆಸಬೇಕು. ಸಾವಯವ ಪದ್ಧತಿಯಲ್ಲಿ ಶುಂಠಿ ಬೆಳೆಯುವುದಕ್ಕೆ ನಮ್ಮ ವಿರೋಧವಿಲ್ಲ ಎಂದು ಆಶೀಸರ ಸ್ಪಷ್ಟಪಡಿಸಿದರು. ಪತ್ರಿಕಾಗೋಷ್ಠಿಯಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯ ಪರಿಸರ ವಿಜ್ಞಾನಿ ಡಾ.ಟಿ.ವಿ. ರಾಮಚಂದ್ರ, ವಿಜ್ಞಾನಿ ಸುದರ್ಶನ ಭಟ್ ಮತ್ತಿತರರು ಹಾಜರಿದ್ದರು.